ಮೂಲ ದಾವಾ ನಂಃ 26/2017

ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **05-10-2023** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್.ಯು.ಎನ್ ವಕೀಲರಿಂದಃ**

ಸರ್ವೇ ನಂಬರ್ 72 ಅರಣ್ಯ ಇಲಾಖೆಗೆ ಸಂಬಂಧಪಟ್ಟಿದೆ ಎಂಬ ಬಗ್ಗೆ ನಾವು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅರಣ್ಯ ಇಲಾಖೆಯವರು ಆ ರೀತಿ ಯಾವುದೇ ದಾಖಲೆಗಳನ್ನು ಕೊಡುವುದಿಲ್ಲ ಎಂದು ನುಡಿದಿದ್ದಾರೆ. ನಾನು ಅರಣ್ಯ ಇಲಾಖೆಗೆ ಪಹಣಿ ಪತ್ರಿಕೆ ಕೊಡುವಂತೆ ಕೋರಿ ಅರ್ಜಿಯನ್ನು ಕೊಟ್ಟಿದ್ದು ಇರುವುದಿಲ್ಲ. ನಾವು ನಮ್ಮ ಅಜ್ಜನ ಕಾಲದಿಂದಲೂ ಸದ್ರಿ ಸ್ಥಳವನ್ನು ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಾ ಬಂದಿದ್ದೇವೆ. ನನ್ನ ಅಜ್ಜನ ಹೆಸರು ಗಣಪ ನಾರಾಯಣ ಗೌಡ ಆಗಿದ್ದು , ಆತನಿಗೆ 3 ಜನ ಮಕ್ಕಳಿದ್ದು , ಅವರುಗಳ ಹೆಸರು ಗಜಾನನ , ನಾರಾಯಣ , ಮತ್ತು ಸುಬ್ಬ ಆಗಿರುತ್ತದೆ ಮತ್ತು ಅವರೆಲ್ಲ ಈಗ ತೀರಿ ಹೋಗಿದ್ದಾರೆ. ನನ್ನ ತಂದೆಯ ಹೆಸರು ಗಜಾನನ ಹೆಗಡೆ ಆಗಿದ್ದು , ಆತನಿಗೆ ಒಟ್ಟು 4 ಜನ ಮಕ್ಕಳು. ನಮ್ಮ ಅಜ್ಜನ ಕುಟುಂಬದಲ್ಲಿರುವ ಆಸ್ತಿಗಳು ಅವರ ಕುಟುಂಬದಲ್ಲಿ ವಾಂಟಣಿ ಆಗಿವೆ.

ನಮ್ಮ ಅಣ್ಣ ತಮ್ಮಂದಿರಲ್ಲಿ ಮಾಲ್ಕೀ ಹಕ್ಕಿನ ಜಾಗವು ವಾಂಟಣಿ ಆಗಿದ್ದು ಇರುವುದಿಲ್ಲ. ನನ್ನ ಅಜ್ಜ ಯಾವ ವರ್ಷ ಸದ್ರಿ ಸ್ಥಳವನ್ನು ಅತಿಕ್ರಮಣ ಮಾಡಿದ್ದಾನೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ತೀರಿ ಹೋದ ತಾರೀಖ ನನಗೆ ಗೊತ್ತಿಲ್ಲ. ನನ್ನ ಅಜ್ಜನು ಅತಿಕ್ರಮಣ ಜಾಗದ ಬಗ್ಗೆ ಮಂಜೂರಿಗಾಗಿ ಅರಣ್ಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದು, ಸದ್ರಿ ಅರ್ಜಿಯು ದೋಣಿ ಮುಳುಗಿದ್ದರಿಂದ ನಾಶವಾಗಿ ಹೋಗಿದೆ ಎಂಬುದನ್ನು ಕೇಳಿ ತಿಳಿದುಕೊಂಡಿದ್ದೇನೆ. ನನ್ನ ತಂದೆ ಅರಣ್ಯ ಇಲಾಖೆಗೆ ಸದ್ರಿ ಅತಿಕ್ರಮಣ ಜಾಗಕ್ಕೆ ಸಂಬಂಧಪಟ್ಟಂತೆ ಮಂಜೂರಿಗಾಗಿ ಅರ್ಜಿಯನ್ನು ಸಲ್ಲಿಸಿದ್ದು ಇರುವುದಿಲ್ಲ. ಸದ್ರಿ ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ನಾರಾಯಣ ಹೆಗಡೆ ಆದ ನನ್ನ ಚಿಕ್ಕಪ್ಪನು ಮಂಜೂರಿಗಾಗಿ ಅರಣ್ಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದನು. ತದನಂತರದಲ್ಲಿ ನಾನು ಸದ್ರಿ ದಾವಾ ಸ್ಥಳದ ಮಂಜೂರಿಗಾಗಿ ಅರಣ್ಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದೆನು. ಸದರಿ ಅರ್ಜಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನಾವು ಅತಿಕ್ರಮಣ ಮಾಡಿದ ಸ್ಥಳದಲ್ಲಿ ಗೇರು ಬೀಜವನ್ನು , ಮತ್ತು ಮುರುಗಲ ಹಣ್ಣನ್ನು ಬೆಳೆದಿದ್ದೇವೆ. ಇದು ಕಾಡು ಜಾತಿಯ ಮರ ಎಂದರೆ ಸರಿ. ನಾವು ಆ ಗಿಡಗಳನ್ನು ನೆಟ್ಟು ಬೆಳೆಸಿಲ್ಲ ಎಂದರೆ ಸರಿಯಲ್ಲ. ನಮ್ಮ ಮಾಲ್ಕೀ ಸರ್ವೇ ನಂಬರ್ 41, 42, 44 ರ ಪಹಣಿ ಪತ್ರಿಕೆಗಳನ್ನು , ಮತ್ತು ನಕಾಶೆಯನ್ನು ನಾವು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ನಾವು ಅತಿಕ್ರಮಣ ಮಾಡಿದ ಸ್ಥಳವು ನಮ್ಮ ಮನೆಯ ಪಕ್ಕದಲ್ಲಿಯೇ ಇದೆ. ನಮ್ಮ ಮನೆಯ ಉತ್ತರ ದಿಕ್ಕಿಗೆ ಸದ್ರಿ ಅತಿಕ್ರಮಣ ಜಾಗ ಇದೆ. ಸರ್ವೇ ನಂಬರ್ 42 ರಿಂದ 44 ರ ಜಾಗದ ಉತ್ತರ ದಿಕ್ಕಿಗೆ ಅತಿಕ್ರಮಣ ಜಾಗ ಬರುತ್ತದೆ. ಸದರಿ ಅತಿಕ್ರಮಣ ಜಾಗವು ಸರ್ವೇ ನಂಬರ್ 42 ರಿಂದ 44 ರ ಗಡಿಗೆ ಹೊಂದಿಕೊಂಡು ಇದೆ. ಅತಿಕ್ರಮಣ ಸ್ಥಳವು ಈ ಮೇಲೆ ಹೇಳಿದ ಮಾಲ್ಕೀ ಸರ್ವೇ ನಂಬರಗಳಿಗೆ ಲಗತ್ತ ಆಗಿದೆ ಎಂಬ ಬಗ್ಗೆ ನಾವು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಯನ್ನು ಹಾಜರುಪಡಿಸಿದ್ದು ಇರುವುದಿಲ್ಲ. ಅತಿಕ್ರಮಣ ಜಾಗದ ಉತ್ತರ ದಿಕ್ಕಿಗೆ ಶಂಭು ಗಣಪಯ್ಯ ನಾಯ್ಕ ರವರ ಮಾಲ್ಕೀ ಜಾಗವಿದೆ. ಸದ್ರಿ ಅತಿಕ್ರಮಣ ಜಾಗದ ದಕ್ಷಿಣ ದಿಕ್ಕಿಗೆ ನಮ್ಮ ಮನೆ ಮತ್ತು ಜಮೀನು ಇದೆ. ಸದ್ರಿ ಅತಿಕ್ರಮಣ ಜಾಗದ ಪೂರ್ವ ದಿಕ್ಕಿಗೆ ನಮ್ಮದೇ ಅಡಿಕೆ ತೋಟವಿದ್ದು ಅದರ ಸರ್ವೇ ನಂಬರ್ 45 ಆಗಿರುತ್ತದೆ. ಸದ್ರಿ ಅತಿಕ್ರಮಣ ಜಾಗದ ಪಶ್ಚಿಮ ದಿಕ್ಕಿಗೆ ನಮ್ಮದೇ ಮಾಲ್ಕೀ ಜಾಗವಿದೆ.

ಸದ್ರಿ ಫಾರೆಸ್ಟ ಸರ್ವೇ ನಂಬರ್ 72 ಇದು ಎಷ್ಟು ಕ್ಷೇತ್ರವನ್ನು ಹೊಂದಿದೆ ಎಂಬುದು ನನಗೆ ಗೊತ್ತಿಲ್ಲ. ನಾವು ಅರಣ್ಯ ಸಮಿತಿಯವರನ್ನು ಕೇಳಿದಾಗ ಅವರು ಇದು ಅರಣ್ಯ ಇಲಾಖೆಯ ಜಾಗ ಎಂದು ಹೇಳಿದರು. ನಾವು ಸದ್ರಿ ದಾವಾ ಸ್ಥಳದ ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಗಳ ಜೇರಾಕ್ಸ ಪ್ರತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ನಾವು ಅರ್ಜಿ ಸಲ್ಲಿಸಿದ ಇಲಾಖೆಗೆ ಅವುಗಳ ಧೃಢೀಕೃತ ನಕಲನ್ನು ಕೊಡುವಂತೆ ಚೌಕಾಸಿಯನ್ನು ಮಾಡಿದ್ದು ಇರುವುದಿಲ್ಲ. ನಾವು ಸದ್ರಿ ದಾವಾ ಸ್ಥಳದ ಮಂಜೂರಾತಿಗಾಗಿ ಅರ್ಜಿಗಳನ್ನು ಪಂಚಾಯತ್ ಅವರಿಗೆ ಕೊಟ್ಟಿದ್ದು , ಆ ಅರ್ಜಿಗಳನ್ನು ಅವರು ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದಾರೆ. ನಾವು ಪಂಚಾಯತ್ ಅವರಿಗೆ ಅರ್ಜಿ ಕೊಟ್ಟಾಗ ಅವರು ಅದರ ಬಗ್ಗೆ ನಮಗೆ ಸ್ವೀಕೃತಿಯನ್ನು ನೀಡಿದ್ದು ಅದನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನಾನು ಅರ್ಜಿ ನೀಡಿದ್ದು ಅಂದಾಜು 2013 ನೇ ಸಾಲಿನಲ್ಲಿ ಇರಬಹುದು.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಪ್ರ ದ ನ್ಯಾದಂ ಹೊನ್ನಾವರ.